# ಶ್ರೀ ಶ್ರೀಶ್ರೀ 1008ಶ್ರೀವಿದ್ಯಾನಿಧಿತೀರ್ಥ ಶ್ರೀಪಾದಂಗಳವರಚರಿತ್ರೆ

**(ಕ್ರೀ.ಶ.1848–1866)**

**ಸರ್ವಗುಣಸಮಾಯುಕ್ತಂ ವಿಠ್ಠಲಂ ಸಮುಪಾಸಯನ್ ।**
**ಸಮಸ್ತಶಿಷ್ಯಸಂದೋಹಂ ಸಮುದ್ಧರನ್ ಸದಾ ಹಿ ಯಃ ॥**
**ತತ್ತ್ವಾರ್ಥಂ ಬೋಧಯಾಮಾಸ ದ್ವೈತಾಮೃತರಸಾಯನಮ್ ।**
**ವಿದ್ಯಾನಿಧೀಮುನೀಂದ್ರಂ ತಂ ಚಿಂತಯೇ ಹಂ ಕೃಪಾನಿಧಿಮ್ ॥**

ಭಾರತೀಯ ಆಧ್ಯಾತ್ಮಿಕ ಪರಂಪರೆಗೆ ವೇದೋಪನಿಷತ್ತುಗಳೇ ಮೂಲಾಧಾರ. ಸಹಸ್ರಾರು ವರ್ಷಗಳಿಂದ ಋಷಿ ಮುನಿಗಳು , ಸತ್ಪುರುಷರು ವೇದೋಪನಿಷತ್ತುಗಳ ಸಾರವನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಉಪದೇಶಿಸಿದ್ದಾರೆ. ಅವರಲ್ಲಿ ಶ್ರೀ ಯಾಜ್ಞವಲ್ಕ್ಯ ಮಹರ್ಷಿಗಳು ಬಹಳ ಪ್ರಮುಖರು. ಸೂರ್ಯಾಂತರ್ಗತ ಶ್ರೀಮನ್ನಾರಾಯಣನನ್ನು ಉಪಾಸನೆ ಮಾಡಿ ಇಡೀ ತಾಪಸಕರೆಲ್ಲ ಬೆರಗಾಗುವಂತೆ "ಶುಕ್ಲ ಯಜುರ್ವೇದ" ಎಂಬ ಮಂತ್ರ ಸಮೂಹವನ್ನು ಜಗತ್ತಿಗೆ ಪರಿಚಯಿಸಿದರು. ಹೊಸ ಪರಂಪರೆಯನ್ನು ಹುಟ್ಟು ಹಾಕಿದರು. ಅವರ ನೇರ ಶಿಷ್ಯರು ಶ್ರೀ ಕಣ್ವ ಮಹರ್ಷಿಗಳು.

ಶುಕ್ಲ ಯಜುರ್ವೇದ ಪರಂಪರೆಯ ರಾಷ್ಟ್ರದ ಏಕೈಕ ಮಠವೇ ಶ್ರೀಮದ್ ಕಣ್ವಮಠ. ಮೂರು ಶತಮಾನಗಳಿಗೂ ಹೆಚ್ಚಿನ ಇತಿಹಾಸವಿರುವ ಶ್ರೀಮದ್‌ಕಣ್ವಮಠಕ್ಕೆ ಅನೇಕ ಮಾಹಾನ್ ಯತಿಗಳು ಪೀಠದಲ್ಲಿ ವಿರಾಜಮಾನರಾಗಿದ್ದಾರೆ. ಭಕ್ತ ಸಮೂಹವನ್ನು ಸನ್ಮಾರ್ಗದಲ್ಲಿ ಕೊಂಡೊಯ್ದು ಪಾವನಗೋಳಿಸಿದ್ದಾರೆ. ಇವರಲ್ಲಿ ಶ್ರೀ ವಿದ್ಯಾನಿಧಿತೀರ್ಥರದ್ದು ಬಹುದೊಡ್ಡ ಹೆಸರು.

ಶ್ರೀ ವಿದ್ಯಾನಿಧಿತೀರ್ಥರ ಪೂರ್ವಾಶ್ರಮದ ವೃತ್ತಾಂತ ಹೆಚ್ಚಿಗೆ ತಿಳಿಯದು. "ಕೌಶಿಕ ಗೋತ್ರೋದ್ಭವಸ್ಯ, –?– ಪುತ್ರಃ ವೇಂಕಟೇಶ ಶರ್ಮನ್". ಬಾಗಲಕೋಟೆ ಮೂಲದ ಜಹಗಿರದಾರ ಮನೆತನದ ವೆಂಕಟೇಶಾಚಾರ್ಯ ಎಂಬುದು ಪೂರ್ವಾಶ್ರಮದ ಹೆಸರು. ಪರಮ ಪವಿತ್ರ ಕೌಶಿಕ ಗೋತ್ರದ ಸಾತ್ವಿಕ ವೈದಿಕ ಮನೆತನ ಬಾಲ್ಯದಲ್ಲಿಯೆ ಸಾತ್ವಿಕ ಗುಣಗಳನ್ನು ಹೊಂದಿದ್ದ ವೆಂಕಟೇಶ ಯಾವಾಗಲು ಅಂತರ್ಮುಖಿ. ಪ್ರೀತಿಪಾತ್ರರರಿಗೆ ಎಂಕಣ್ಣ ಎಂದೇ ಪರಿಚಿತ. ವಾಯು ದೇವರು ಬಾಲಕ ವೆಂಕಟೇಶನ ಆರಾಧ್ಯ ದೈವ. ಭಾಗವತ, ಪುರಾಣ, ಧಾರ್ಮಿಕ ಗ್ರಂಥಗಳ ಅಧ್ಯಾಯನದಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದ. ವಾದ, ವಾಕ್ಯಾರ್ಥ, ಪಾಠ ಪ್ರವಚನಗಳ ಮೂಲಕ ವೆಂಕಟೇಶ, ವೆಂಕಟೇಶಾಚಾರ್ಯರೆಂದು ಗೌರವ ಸಂಪಾದಿಸಿದ. ಬರುಬರುತ್ತಾ ಆಧ್ಯಾತ್ಮಿಕದತ್ತ ಒಲವು ಹೆಚ್ಚಾದಂತೆ, ವೆಂಕಟೇಶಾಚಾರ್ಯರು ಹೆಚ್ಚಿನ ಸಾಧನೆಗೆ ಗುರುಗಳನ್ನು ಹುಡುಕಿಕೊಂಡು ದೇಶ ಸಂಚಾರಕ್ಕೆ ಹೊರಟೇಬಿಟ್ಟರು!.

ಸಂಚಾರ ಮಾಡುತ್ತಾ ಕೃಷ್ಣಾ ತೀರಕ್ಕೆ ಬಂದಾಗ ಶ್ರೀಕಣ್ವ ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥರ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ವೆಂಕಟೇಶಾಚಾರ್ಯರ ಪಾಂಡಿತ್ಯ ಗಮನಿಸಿದ ಶ್ರೀ ವಿದ್ಯಾಧೀಶತೀರ್ಥರು ಮುಂದೆ ಮಠಕ್ಕೆ ಪೀಠಾಧಿಪತಿಗಳಾಗಲು ಇವರೇ ಸಮರ್ಥರು ಎಂದು ಅದಾಗಲೇ ನಿಶ್ಚಯಿಸಿದರು.

ಕಾಲ ಕೂಡಿ ಬಂದಿತು, ಶ್ರೀ ವಿದ್ಯಾಧೀಶತೀರ್ಥರು ವೆಂಕಟೇಶಾಚಾರ್ಯರಿಗೆ ತುರಿಯಾಶ್ರಮ ಸ್ವೀಕಾರಕ್ಕೆ ಅಪ್ಪಣೆಯಿತ್ತು, ಫಲಮಂತ್ರಾಕ್ಷತೆ ಅನುಗ್ರಹಿಸಿದರು. ವಿಠ್ಠಲ ಕೃಷ್ಣನ ಆಜ್ಞಾನುಸಾರ ಕೀಲಕನಾಮ ಸಂವತ್ಸರ ಆಷಾಢ ಕೃಷ್ಣಪಕ್ಷ ದ್ವಿತಿಯಾ ದಿ. 18/7/1848 ರ ದಿನದಂದು ಪರಂಪರಾಗತ ಕ್ರಮದಂತೆ ಆಶ್ರಮ ಸ್ವೀಕರಿಸಿ ಬಂದ ನೂತನ ಗುರುಗಳಿಗೆ ಗುರೂಪದೇಶಾದಿಗಳನ್ನು ಮಾಡಿ "ಶ್ರೀ ವಿದ್ಯಾನಿಧಿತೀರ್ಥ ಶ್ರೀಪಾದಂಗಳವರು" ಎಂಬ ನಾಮಕರಣ ಮಾಡಿದರು. ಹೀಗೆ ಶ್ರೀ ಕಣ್ವಮಠದ ಪರಂಪರೆಯಲ್ಲಿ ಶ್ರೀಮನ್ಮಾಧವತೀರ್ಥರಿಂದ ನಾಲ್ಕನೇಯ ಯತಿಗಳಾಗಿ ಶ್ರೀ ವಿದ್ಯಾನಿಧಿತೀರ್ಥರು ಪೀಠವನ್ನು ಅಲಂಕರಿಸಿದರು. ವೆಂಕಟೇಶಾಚಾರ್ಯರು ದೀಕ್ಷೆ ಪಡೆದದ್ದು ಬಹುಶಃ ತಮ್ಮ ನಡು ವಯಸ್ಸಿನಲ್ಲಿ. ಅಂದರೆ ಅಂದಾಜು 40–45 ರ ಆಸು ಪಾಸು.

ಹೊಸದಾಗಿ ಪೀಠವನ್ನು ಅಲಂಕರಿಸಿದ ಶ್ರೀ ವಿದ್ಯಾನಿಧಿತೀರ್ಥರನ್ನು ಸುರಪುರದ ಅರಮನೆಯಲ್ಲಿ ವಿಠ್ಠಲ ಕೃಷ್ಣನ ಪೂಜೆ ನೆರವೇರಿಸಲು ನಾಲ್ವಡಿ ರಾಜಾ ವೆಂಕಟಪ್ಪ ನಾಯಕ (ಸುರಪುರದ ಕೊನೆಯ ಅರಸ) ದೊರೆಗಳು ವಿನಂತಿಸಿಕೊಳ್ಳುತ್ತಾರೆ. ದೊರೆಗಳ ಆಪೇಕ್ಷೆಯನ್ನು ಮನ್ನಿಸಿದ ಶ್ರೀ ವಿದ್ಯಾನಿಧಿತೀರ್ಥರು ಪುರಪ್ರವೇಶಕ್ಕೆ ಒಪ್ಪಿಗೆ ನೀಡುತ್ತಾರೆ. ಆನೆ, ಮೇನೆ ಮತ್ತು ಪಲ್ಲಕ್ಕಿಯಲ್ಲಿ ಗುರುಗಳ ಪುರಪ್ರವೇಶ ಬಹಳ ವಿಜ್ರಂಬಣೆಯಿಂದ ನೆರವೇರುತ್ತದೆ. ಸ್ವತಃ ದೊರೆ (ಆಗಿನ್ನು ಹದಿನೈದು ವರ್ಷದ ಬಾಲಕ) ಮತ್ತು ರಾಜ ಪರಿವಾದವರು ಗುರುಗಳನ್ನು ಮೇನೆಯಲ್ಲಿ ಹೊತ್ತು ದರಬಾರಿಗೆ ಕರೆತರುತ್ತಾರೆ ಎಂದು ಐತಹ್ಯವಿದೆ. ರಾಜಮಾತೆ ಈಶ್ವರಮ್ಮಳ ನೇತ್ರತ್ವದಲ್ಲಿ ಗುರುಗಳಿಗೆ ರಾಜ ಮರ್ಯಾದೆ ಸಲ್ಲಿಸಲಾಗುತ್ತದೆ. ಅಷ್ಟೆ ಅಲ್ಲ, ಅವರ ಪೂರ್ವಾಶ್ರಮದ ಕುಟುಂಬದವರಿಗೆ ಜೀವನೋಪಾಯಕ್ಕೆ ಸುರಪುರದ ಸಮೀಪ ಶಾರದಳ್ಳಿ ಎಂಬ ಗ್ರಾಮವನ್ನು ಜಾಹಾಗೀರಿ ಹಾಕಿ ಕೊಟ್ಟು ನೆಲೆ ಒದಿಗಿಸುತ್ತಾರೆ.

ಶ್ರೀ ವಿದ್ಯಾನಿಧಿತೀರ್ಥರು ನಿತ್ಯ ಮಠದ ಸಂಸ್ಥಾನ ಪೂಜೆ ಮತ್ತಿತರ ದೇವತಾ ಕಾರ್ಯಗಳನ್ನು ಚಾಚು ತಪ್ಪದೆ ಮಾಡುತ್ತಿದ್ದರು. ಕೃಷ್ಣೆ, ತುಂಗೆ ಮತ್ತು ಭೀಮೆಯ ಕೊಳ್ಳ ಪ್ರದೇಶಗಳಲ್ಲಿ ಸಂಚಾರ ಮಾಡಿ ಮಠದ ಸಿದ್ಧಾಂತವನ್ನು ಪ್ರಚುರಪಡಿಸುತ್ತಾ ಅಪಾರ ಭಕ್ತ ಸಮೂಹವನ್ನು ಮಠಕ್ಕೆ ಪರಿಚಯಿಸಿದರು. ಇವರ ಕಾಲದಲ್ಲಿ ಪ್ರಥಮ ಶಾಖೀಯರಿಗೆ ಕಣ್ವಮಠದ ಅಸ್ಮಿತೆಯ ಹೆಮ್ಮೆ ಪಡುವಂತಾಯಿತು. ಸಕಲ ಶಾಸ್ತ್ರ ಪಾರಂಗತರಾದ ಶ್ರೀಗಳು ಪಾಠ, ಪ್ರವಚನ, ಚರ್ಚೆಯಲ್ಲಿ ಮಗ್ನರಾಗುತ್ತಿದ್ದರು. ಅವರ ಶಾಸ್ತ್ರಾಧ್ಯಾಯನ ಚರ್ಚೆ, ವಾಕ್ಯಾರ್ಥ, ಸಂಭಾಷಣೆ, ಪ್ರವಚನಗಳು ಪಂಡಿತರಿಗೆ ಮತ್ತು ಭಕ್ತರಿಗೆ ರಸದೌತಣ ನೀಡಿದ್ದವು. ಅವರ ಕಾಲದಲ್ಲಿ ಮಠದ ಗೌರವ ಇನ್ನೂ ಹೆಚ್ಚಾಯಿತು.

ತಮಗೆ ಸನ್ಯಾಸ ದೀಕ್ಷೆ ನೀಡಿದ ಶ್ರೀ ವಿದ್ಯಾಧೀಶತೀರ್ಥರ ಬಗ್ಗೆ ಅಪಾರ ಗೌರವ ಮತ್ತು ಭಕ್ತಿಯನ್ನು ಹೊಂದಿದ್ದರು. ಅಂತೆಯೆ ತಮ್ಮ ಗುರುಗಳ ಕುರಿತು ಕೆಳಗಿನ ಶ್ಲೋಕ ಬರೆದು ಗುರುಭಕ್ತಿಯನ್ನು ಪ್ರದರ್ಶಿಸಿದ್ದಾರೆ.

**ವಿದ್ಯಾಧೀಶಂ ಮಧ್ವಶಾಸ್ತ್ರಂ ಪ್ರಣೇತಾರಮಭೀಷ್ಟಾದಂ ।**
**ಗುರುವರ್ಯಂ ಜ್ಞಾನಪೂರ್ಣಂ ವಿದ್ಯಾನಿಧಿ ಮಹಂ ಭಜೆ ॥**

ಅರ್ಥ: ದ್ವೈತ ಮತ (ಮಧ್ವ ಶಾಸ್ತ್ರ) ಪರಿಣೀತ, ಭಕ್ತರ ಅಭೀಷ್ಟೆ ಪೊರೈಸುವ, ಜ್ಞಾನಿಗಳಾದ ಗುರುಗಳಾದ ವಿದ್ಯಾಧೀಶತೀರ್ಥರಿಗೆ ನಮ್ಮ (ವಿದ್ಯಾನಿಧಿ) ನಮನಗಳು.

ಹದಿನೆಂಟು ವರ್ಷಗಳವರೆಗೆ ಶ್ರೀಮಧ್‌ಕಣ್ವಮಠದ ಪೀಠದಲ್ಲಿ ವಿರಾಜಮಾನರಾಗಿ ಶುಕ್ಲ ಯಜುರ್ವೇದೀಯ ಭಾಗವತ ಸಂಪ್ರದಾಯದ ಜ್ಯೋತಿಯನ್ನು ಎಲ್ಲ ಕಡೆ ಪಸರಿಸಿ ವಿಠ್ಠಲಕೃಷ್ಣನ ಧ್ಯಾನದಲ್ಲಿ ನಿರತರಾಗಿದ್ದು ತಮ್ಮ ನೆಚ್ಚಿನ ಶಿಷ್ಯರಾದ ಹನುಮಂತಾಚಾರ್ಯ ಕನಕಗಿರಿ ಇವರಿಗೆ ಆಶ್ರಮ ದೀಕ್ಷೆ ನೀಡಿ ಶ್ರೀ ವಿದ್ಯಾಸಂಪೂರ್ಣತೀರ್ಥರು ಎಂದು ನಾಮಾಭಿದಾನಗೈದು ಅನುಗ್ರಹಿಸಿದರು. ಅದೇ ದಿನ ಅಂದರೆ ಅಕ್ಷಯನಾಮ ಸಂವತ್ಸರ ಫಾಲ್ಗುಣ ಕೃಷ್ಣ ಪಕ್ಷ ಷಷ್ಠಿ ದಿ. 7/3/1866 ರಂದು ತಮ್ಮ ಆರಾಧ್ಯ ಗುರುಗಳಾದ ಶ್ರೀ ಅಕ್ಷೋಭ್ಯತೀರ್ಥರು ವೃಂದಾವನಸ್ಥರಾದ ಸ್ಥಳ ಸುಕ್ಷೇತ್ರ ಬಿಳೇಭಾವಿಯಲ್ಲಿ ಶ್ರೀ ಮಾಧವತೀರ್ಥರ ಒಂದಂಶ ಸನ್ನಿಹಿತವಾಗಿ ಹರಿಪಾದ ಸೇರಿದರು. ಶ್ರೀ ಅಕ್ಷೋಭ್ಯತೀರ್ಥರ ವೃಂದಾವನದ ಪಕ್ಕದಲ್ಲಿ ಸುಂದರ ವೃಂದಾವನವನ್ನು ಶ್ರೀ ವಿದ್ಯಾಸಂಪೂರ್ಣತೀರ್ಥರು ಸ್ವತಃ ನಿಂತು ನಿರ್ಮಾಣ ಮಾಡಿಸಿದ್ದಾರೆ. ಸಕಲ ಭಕ್ತರ ಅಭೀಷ್ಟೆ ನೆರವೇರಿಸುತ್ತಾ ಬಿಳೇಭಾವಿಯಲ್ಲಿ ನೆಲೆಸಿದ್ದಾರೆ.

ಪ್ರತಿ ವರ್ಷ ಫಾಲ್ಗುಣ ಕೃಷ್ಣ ಪಕ್ಷ ಷಷ್ಠಿಯಂದು ಆರಾಧನೆ ಬಹಳ ವಿಜೃಂಭಣೆಯಿಂದ ನೆರವೇರುತ್ತದೆ. ಎಲ್ಲಕಡೆಗಳಿಂದಲೂ ಭಕ್ತರು ಸಾಗರೋಪಾದಿಯಲ್ಲಿ ಬಂದು ಗುರುಗಳ ದರ್ಶನ ಪಡೆದು ಪುನೀತರಾಗುತ್ತಾರೆ. ಅಲ್ಲೆ ಸಮೀಪ ನಾಗೂರು ಗ್ರಾಮದ ದೇಶಪಾಂಡೆ ಮನೆತನದವರು ತಲೆತಲಾಂತರದಿಂದಲೂ ಶ್ರದ್ಧಾ ಭಕ್ತಿಯಿಂದ ಆರಾಧನೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಶ್ರೀ ವಿದ್ಯಾನಿಧಿತೀರ್ಥರ ಪವಾಡಗಳು ಬಿಳೇಭಾವಿ ಮತ್ತು ಸುತ್ತಲಿನ ಊರುಗಳಲ್ಲಿ ಜನಜನಿತವಾಗಿವೆ. ಅವರನ್ನು ಭಕ್ತಿಯಿಂದ ನೆನೆದರೆ ಮನೋಕಾಮನೆಗಳು ಇಡೇರುತ್ತವೆ ಎಂಬ ಪ್ರತೀತಿ ಇದೆ. ಅಂಥಹ ಕೆಲ ಪವಾಡಗಳು ಅನೇಕರ ಜೀವನದಲ್ಲಿ ನಡೆದಿವೆ. ಇವರು ಮಹಾಮಹಿಮರು, ತಪಸ್ವಿಗಳು ಮತ್ತು ಅಪರೋಕ್ಷಜ್ಞಾನಿಗಳು.

ಶ್ರೀ ವಿದ್ಯಾನಿಧಿತೀರ್ಥರು ವೃಂದಾವನಸ್ಥರಾದ ಹಲವು ದಿನಗಳ ನಂತರ ಬಿಳೇಭಾವಿ ಕುಲಕರ್ಣಿಯವರ ತಾಯಿಗೆ ರಾತ್ರಿ ಕನಸಿನಲ್ಲಿ "ನನ್ನ ಬೆನ್ನಿಗೆ ಹಳ್ಳು ತಾಗಿ ನೋವಾಗುತ್ತಿದೆ ತೆಗೆಯಿರಿ" ಎಂದು ಅಶರೀರ ವಾಣಿ ಕೇಳಿಸಿತಂತೆ. ಮೊದ ಮೊದಲು

ಅಷ್ಟು ಗಂಭೀರವಾಗಿ ಪರಿಗಣಿಸದೆ ಇದ್ದಾಗ, ಮತ್ತೆ ಮತ್ತೆ ಅದೇ ವಾಣಿ ರಾತ್ರಿ ಕನಸಿನಲ್ಲಿ ಕೇಳಲು, ಕಸಿ ವಿಸಿ ಆಗಿ ತಮ್ಮ ಯಜಮಾನರಲ್ಲಿ ಹೇಳಿಕೊಳ್ಳುತ್ತಾರೆ. ಕುಲಕರ್ಣಿಯವರು, ಶ್ರೀ ವಿದ್ಯಾಸಂಪೂರ್ಣತೀರ್ಥರಲ್ಲಿ ಈ ವಿಷಯವನ್ನು ನಿವೇದಿಸಿಕೊಳ್ಳುತ್ತಾರೆ. ಆಗ ಶ್ರೀಗಳ ಅನುಮತಿಯೊಂದಿಗೆ ಶುಭ ದಿನದಂದು ವೃಂದಾವನವನ್ನು ಪುನಃ ತೆಗೆದು ನೋಡಲಾಗಿ ಎಲ್ಲರಿಗೂ ಆಶ್ಚರ್ಯ! ಬೆನ್ನಿನ ಭಾಗದಲ್ಲಿ ಒಂದು ಸಣ್ಣ ಕಲ್ಲು ಇದ್ದದ್ದು ನೋಡಿ ಭಕ್ತವೃಂದ ಮೂಕವಿಸ್ಮಿತರಾಗುತ್ತಾರೆ. ಕಲ್ಲು ತೆಗೆದು ಪುನಃ ಶಾಸ್ತ್ರೋಕ್ತವಾಗಿ ಪ್ರತಿಸ್ಥಾಪನೆ ಮಾಡಲಾಗಿ ಕನಸು ಬೀಳುವುದು ನಿಂತಿತಂತೆ.

ಬಿಳೇಭಾವಿಯಲ್ಲಿ ವೃಂದಾವನ ಸಮುಚ್ಚದ ಸಮೀಪವೆ ಒಂದು ಸಿಹಿ ನೀರಿನ ಭಾವಿ ಇದೆ. ಊರ ಜನರು ಅದೇ ಭಾವಿಯ ನೀರನ್ನು ಕುಡಿಯಲು ಈಗಲೂ ಬಳಸುತ್ತಾರೆ. ಒಂದು ದಿನ ಗೋಧೂಳಿ ಸಮಯ, ಎಂದಿನಂತೆ ಊರ ಮಹಿಳೆಯರು ನೀರು ತರುತ್ತಿರಲು, ಒಬ್ಬ ಮಹಿಳೆಗೆ "ಸಾಕು ಇನ್ನು ನೀರು ತರುವುದು, ಕೊಡ ಇಳಿಸಿರಿ" ಎಂದು ಯಾರೋ ಹೇಳಿದಂತೆ ಕೇಳಿಸುತ್ತದೆ. ಈ ವಿಷಯವನ್ನು ಅವಳು ತನ್ನ ಗೆಳತಿಯರಿಗೆ ಹೇಳುತ್ತಾಳೆ. ಊರ ಕಡೆ ತುಂಬಿದ ಕೊಡಹೊತ್ತು ಹೋಗುತ್ತಿರುವಾಗ ಇತರೆ ಮಹಿಳೆಯರಿಗೂ ಅದೇ ಅಶರೀರವಾಣಿ ಸ್ಪಷ್ಟವಾಗಿ ಕೇಳಿಸಿತಂತೆ. ಅವತ್ತು ಮತ್ತೆ ನೀರು ತರುವ ಸಾಹಸ ಯಾರೂ ಮಾಡವುದಿಲ್ಲ. ಮುಂದಾಗುವ ಪ್ರಾಕೃತಿಕ ವಿಕೋಪದ ಅಥವಾ ಯಾವದೋ ಅಪಾಯದ ಮುನ್ನೆಚ್ಚರಿಕೆಯನ್ನು ಗುರುಗಳು ನೀಡಿರಬಹುದು ಎಂದುಕೊಳ್ಳುತ್ತಾರೆ. ಈ ವಿಷಯವನ್ನು ನಾಗೂರು ದೇಶಪಾಂಡೆ ಮನೆತನದ ಹಿರಿಯ ಜೀವಿ ಶ್ರೀಮತಿ ಇಂದಿರಾಬಾಯಿಯವರು ಇವತ್ತಿಗೂ ಭಯ ಭಕ್ತಿಯಿಂದ ನೆನೆಯುತ್ತಾರೆ.

ಶ್ರೀ ವಿದ್ಯಾನಿಧೀತೀರ್ಥರನ್ನು ಕುರಿತು ಭಕ್ತರು ಅನೇಕ ಸಾಹಿತ್ಯ ಮತ್ತು ಕೀರ್ತನೆಗಳನ್ನು ರಚಿಸಿ ತಮ್ಮ ಭಕ್ತಿಯನ್ನು ಮೆರೆದಿದ್ದಾರೆ. "ಕಣ್ವಮಠ ಚರಿತ ಪಿಯೂಷ" ಲೇ. ಶ್ರೀ ಕೆ.ಹೆಚ್.ದೇಸಾಯಿ (1991), "ಮಂಜೂಷ" ಶ್ರೀಮತಿ ಸುರೇಖಾ ಡಿ. ಕುಲಕರ್ಣಿ (ಸಂ), ಶ್ರೀ ವೆಂಕಟೇಶ ಕೃಷ್ಣದಾಸರು, ಭೀಮದಾಸರು, ಚಂದ್ರಬಾಯಿ ನಾಯಕ ಗಂಗಾವತಿ, ನರ್ಮದಾಬಾಯಿ ಗಂಗಾವತಿ, ಬಾವುರಾವ್ ರಾ. ಕುಲಕರ್ಣಿ ಮುಂತಾದವರು ಕೀರ್ತನೆಗಳನ್ನು ರಚಿಸಿದ್ದಾರೆ.

ಪ್ರತಿ ವರ್ಷ ಫಾಲ್ಗುಣ ಕೃಷ್ಣ ಪಕ್ಷ ಷಷ್ಠಿಯಂದು ಶ್ರೀ ವಿದ್ಯಾನಿಧಿತೀರ್ಥ ಶ್ರೀಪಾದಂಗಳವರ ಆರಾಧನೆ ಸುಕ್ಷೇತ್ರ ಬಿಳೇಭಾವಿಯಲ್ಲಿ ಬಹು ವಿಜ್ರಂಬಣೆಯಿಂದ ಜರುಗುತ್ತದೆ. ವಿಜಯಪುರ ಜಿಲ್ಲೆಯ ತಾಳಿಕೋಟೆ ಪಟ್ಟಣದಿಂದ ಹುಣಸಗಿ ಹೋಗುವ ಮಾರ್ಗ ಮಧ್ಯ 10 ಕಿ.ಮೀ. ಅಂತರದಲ್ಲಿ ಬಿಳೇಭಾವಿ ಇದೆ. ಬಸ್ಸಿನ ಮತ್ತು ಖಾಸಗಿ ವಾಹನಗಳ ಸಾರಿಗೆ ಸೌಕರ್ಯವಿದೆ. ಇಲ್ಲಿಂದ 32 ಕಿ.ಮೀ ದೂರದಲ್ಲಿ ಮೂಲ ಸಂಸ್ಥಾನಮಠ, ಹುಣಶೀಹೊಳೆ ಇದೆ.

ಇತ್ತೀಚೆಗೆ ಬಿಳೇಭಾವಿಯ ವೃಂದಾವನ ಸಮುಚ್ಚಯವು ಅಲ್ಲಿಯ ಕುಲಕರ್ಣಿ ಮನೆತನದವರ ಮತ್ತು ನಾಗೂರಿನ ದೇಶಪಾಂಡೆ ಮನೆತನದವರ ವಿಶೇಷ ಆಸ್ಥೆಯಿಂದ ಸಾಕಷ್ಟು ಅಭಿವೃದ್ಧಿ ಕಂಡಿದೆ. "ಶ್ರೀ ಅಕ್ಷೋಭ್ಯತೀರ್ಥರ ಮತ್ತು ಶ್ರೀ ವಿದ್ಯಾನಿಧಿತೀರ್ಥರ ಸೇವಾ ಸಮೀತಿ, ಬಿಳೇಭಾವಿ" ಮೂಲಕ ಎಲ್ಲ ಕಾರ್ಯಗಳು ಸಾಂಗವಾಗಿ ನಡೆಯುತ್ತಿವೆ. ಕ್ಷೇತ್ರಕ್ಕೆ ಬರುವ ಭಕ್ತರಿಗೆ ಸಕಲ ಸೌಲಭ್ಯ ಕಲ್ಪಿಸಲು ಸಮೀತಿ ಶ್ರಮಿಸುತ್ತಿದೆ. ಊರಿನಿಂದ ಸ್ವಲ್ಪ ಹೊರಗೆ ಇರುವ, ಪ್ರಶಾಂತ ವಾತಾವರಣ ವೃಂದಾವನಗಳ ಪರಿಸರವನ್ನು ಆಧ್ಯಾತ್ಮಿಕ ತಪೋಭೂಮಿಯನ್ನಾಗಿಸಿದೆ.

ಬನ್ನಿ ಗುರುಗಳ ದರ್ಶನ ಪಡೆದು ಪುನೀತರಾಗೋಣ, ಅವರ ಕೃಪೆಗೆ ಪಾತ್ರರಾಗೋಣ.

ಸಹಕಾರ ಮತ್ತು ಸಹಾಯ: ಶ್ರೀ ಮೋಹನ ದೇವರು, ರಾಯಚೂರು, ಶ್ರೀ ಶ್ರೀಹರಿರಾವ್ ಕುಲಕರ್ಣಿ ಸುರಪುರು, ಶ್ರೀಮತಿ ಶೀಲಾ ದಾಸ, ರಾಯಚೂರು, ಶ್ರೀ ವಿನೋದ ಕುಲಕರ್ಣಿ, ಕಲಬುರ್ಗಿ, ಶ್ರೀ ಗುರುರಾಜರಾವ್ ಖ. ಕುಲಕರ್ಣಿ, ಬಾಗಲಕೋಟೆ (ಸಾ. ಬಿಳೇಭಾವಿ) ಸಹೋದರಿ ಶ್ರೀಮತಿ ಕಮಲಾ ಗು. ಕುಲಕರ್ಣಿ, ಶ್ರೀ ಶಶಿಕಾಂತರಾವ್ ದೇಶಪಾಂಡೆ, ನಾಗೂರು ಮತ್ತು ಧರ್ಮಪತ್ನಿ ಶ್ರೀಮತಿ ಛಾಯಾ ರ. ಕುಲಕರ್ಣಿ.

ಶ್ರೀ ವಿದ್ಯಾನಿಧಿಗುರು ಅಂತರ್ಗತ ವಿಠ್ಠಲಕೃಷ್ಣಾರ್ಪಣಮಸ್ತು

ಲೇಖಕರು : **ಡಾ. ರಮೇಶ ಕೆ. ಕುಲಕರ್ಣಿ,** ಇಲಕಲ್ಲ ,ಬಾಗಲಕೋಟೆ

ಫೋ.ನಂ : 9448393911

* * *